**ನಾಗರೀಕರೆ ಬನ್ನಿ ಕೈ ಜೋಡಿಸಿ, ಮಕ್ಕಳ ಹಕ್ಕುಗಳ ದೊರಕಿಸುವಲ್ಲಿ ಸಹಕರಿಸಿ**

25. ಶಿಕ್ಷಣ, ರಕ್ಷಣೆ, ಚಿಕಿತ್ಸೆಗಾಗಿ ಮಕ್ಕಳು ಕುಟುಂಬದಿಂದ ದೂರ ಇದ್ದಲ್ಲಿ ಅಲ್ಲಿನ ವ್ಯವಸ್ಥೆ, ಪ್ರಗತಿ, ರಕ್ಷಣೆ ಕುರಿತು ಸರ್ಕಾರವೂ ಕಾಲಕಾಲಕ್ಕೆ ಪರಿಶೀಲನೆ ಮಾಡಬೇಕು.

26 ಬಡವರು, ನಿರ್ಗತಿಕರ ಕುಟುಂಬಗಳ ಮಕ್ಕಳ ಪ್ರಗತಿಗಾಗಿ ಸರಕಾರಗಳು, ಸಾಮಾಜಿಕ ಭದ್ರತೆ, ವಿಮೆ, ಇತ್ಯಾದಿ ಸೇವೆಗಳನ್ನು ಒದಗಿಸಲೇಬೇಕು.

27. ಮಕ್ಕಳ ದೈಹಿಕ, ಮಾನಸಿಕ, ಧಾರ್ಮಿಕ ನೈತಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗುವ ಜೀವನ ಮಟ್ಟವನ್ನು ತಕ್ಕ ಮಟ್ಟಿಗೆ ಒದಗಿಸುವುದು ಪೋಷಕರ ಕರ್ತವ್ಯ.

28. ನಿಮಗೆ ಉಚಿತ ಕಡ್ಡಾಯ ಮತ್ತು ಗುಣಮಟ್ಟದ ಶಿಕ್ಷಣ ಪಡೆಯುವ ಹಕ್ಕು ಇದೆ. ಇದನ್ನು ತಡೆ ಹಿಡಿಯುವವರನ್ನು ಸರ್ಕಾರ ಶಿಕ್ಷಿಸಬೇಕು.

29. ವ್ಯಕ್ತಿತ್ವ, ಪ್ರತಿಭೆ, ಮಾನಸಿಕ ಮತ್ತು ದೈಹಿಕ ಸಾಮಾರ್ಥ್ಯಗಳು ವಿಕಾಸವಾಗುವಂತಹ ಶಿಕ್ಷಣ ನಿಮಗೆ ಸಿಗಲೇಬೇಕು. ಬೇರೆಯವರ ಭಾವನೆ, ಹಕ್ಕುಗಳನ್ನು ಗೌರವಿಸು ಮನಸ್ಸನ್ನು ಶಿಕ್ಷಣವು ಮಕ್ಕಳಲ್ಲಿ ಬೆಳೆಸಬೇಕು.

30. ಪ್ರತಿಯೊಬ್ಬರಿಗೂ (ಮೂಲನಿವಾಸಿಗಳು, ಅಲ್ಪಸಂಖ್ಯಾತರು ಇತ್ಯಾದಿ) ತಮ್ಮ ಮಾತೃ ಭಾಷೆ, ಸಂಸ್ಕೃತಿ, ಧರ್ಮವನ್ನು ಅನುಸರಿಸುವ ಹಕ್ಕಿದೆ.

31. ವಿರಾಮ, ವಿಶ್ರಾಂತಿ ಹೊಂದುವ ಆಟ, ಮನೋರಂಜನೆ, ಸೃಜನಶೀಲ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿಯಾಗುವುದು ನಿಮ್ಮ ಹಕ್ಕು.

32. ಆರೋಗ್ಯ ಶಿಕ್ಷಣ, ಅಭಿವೃದ್ಧಿ, ಬಾಲ್ಯ ಅನುಭವಿಸುವುದಕ್ಕೆ ತೊಂದರೆ ಕೊಡಬಹುದಾದ ಯಾವುದೇ ರೀತಿಯ ದುಡಿಮೆಗೆ ಮಕ್ಕಳನ್ನು ದೂಡಬಾರದು. ಇದು ಶಿಕ್ಷಾರ್ಹ ಅಪರಾಧ.

33. ಮಕ್ಕಳಿಂದ ಮಾದಕ ವಸ್ತುಗಳನ್ನು (ಬೀಡಿ, ಸಿಗರೇಟ್, ಗುಟ್ಕಾ ಇತ್ಯಾದಿ) ಮಾರಿಸುವುದು, ಮಾಡಿಸುವುದು, ತರಿಸುವುದು, ಸಾಗಿಸುವುದು, ಮಕ್ಕಳಿಗೆ ಕೊಡುವುದು, ಮಾರುವುದು ಅಪರಾಧ.

34. ಮಕ್ಕಳ ಮೇಲೆ ಲೈಂಗಿಕ ಶೋಷಣೆ ಮಾಡುವುದು, ದೇವದಾಸಿಯನ್ನಾಗಿಸುವುದು, ಬಾಲ್ಯದಲ್ಲೇ ಮದುವೆ ಮಾಡುವುದು ಅಪರಾಧ.

35. ಮಕ್ಕಳನ್ನು ಅಪಹರಿಸುವುದು, ಸಾಗಿಸುವುದು, ಮಾರಾಟ ಮಾಡುವುದು ಶಿಕ್ಷಾರ್ಹ ಅಪರಾಧ.

**ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹಿಸಿ**

**ಮಕ್ಕಳ ಪೋಷಣೆ ಮತ್ತು ರಕ್ಷಣೆ ನಮ್ಮೆಲ್ಲರ ಹೊಣೆ**

36. ಮಕ್ಕಳ ಶ್ರೇಯೋಭಿವೃದ್ಧಿಗೆ, ಒಳಿತಿಗೆ ತೊಂದರೆ ಕೊಡುವಂತಹ ಯಾವುದೇ ಕೃತ್ಯವನ್ನು ಯಾರೂ ಮಾಡದಂತೆ ಸರಕಾರ ತಡೆಯಬೇಕು.

37. ಮಕ್ಕಳನ್ನು ಹಿಂಸೆ, ಶಿಕ್ಷೆ, ಅನಧಿಕೃತ ಬಂಧನಕ್ಕೆ ಗುರಿಯಾಗಿಸಬಾರದು. 18 ವರ್ಷದೊಳಗಿನ ಮಕ್ಕಳು ಯಾವುದೇ ತಪ್ಪು ಮಾಡಿದ್ದರೂ ಅವರನ್ನು ಶಿಕ್ಷಿಸುವ ಬದಲು ಮನಃಪರಿವರ್ತನೆ ಮಾಡಬೇಕು.

38. ಸಶಸ್ತ್ರ, ಹೊಡೆದಾಟಕ್ಕೆ, ಸೈನ್ಯಕ್ಕೆ ಮಕ್ಕಳನ್ನು ಸೇರಿಸಬಾರದು. ಹೊಡೆದಾಟ, ಯುದ್ಧದ ಪ್ರಭಾವ ಮಕ್ಕಳಿಗೆ ಕೆಡುಕು ಮಾಡಬಾರದು.

39. ಮಕ್ಕಳು ಸಶಸ್ತ್ರ ಸಂಘರ್ಷ, ಹಿಂಸೆ, ತಿರಸ್ಕಾರ, ದುರುಪಯೋಗ, ಆರೈಕೆ ಮತ್ತು ಸಾಮಾಜಿಕ ಪುನರ್ವಸತಿಯನ್ನು ಶೀಘ್ರವಾಗಿ ಮಾಡಬೇಕು.

40. ಮಕ್ಕಳು ಕಾನೂನು ಮೀರಿದಲ್ಲಿ ಅವರ ವ್ಯಕ್ತಿತ್ವ, ಗೌರವಗಳಿಗೆ ಧಕ್ಕೆಯಾಗದಂತೆ, ಮನಪರಿವರ್ತನೆಗೆ ಅವಕಾಶ ಮಾಡಿಕೊಡಬೇಕು.

41. ಮಕ್ಕಳಿಗೆ ಅವರ ಹಕ್ಕುಗಳು ಸಿಗಲೇಬೇಕು. ಇದಕ್ಕೆ ಯಾವುದೇ ಕಾಯಿದೆ, ಕಾನೂನು, ನಿಯಮಗಳು ಅಡ್ಡಿಯಾಗಬಾರದು.

42. ದೇಶದ ಎಲ್ಲಾ ಮಕ್ಕಳು ಮತ್ತು ವಯಸ್ಕರಿಗೆ ಮಕ್ಕಳ ಹಕ್ಕುಗಳ ಬಗ್ಗೆ ತಿಳಿಸಲು ಹಾಗೂ ಇದನ್ನು ಜಾರಿ ಮಾಡಲು ವ್ಯಾಪಕ ಪ್ರಚಾರ ಮಾಡುತ್ತಲಿರಬೇಕು.

43. ರಿಂದ 54 ಮಕ್ಕಳ ಹಕ್ಕುಗಳನ್ನು ಹೇಗೆ ಜಾರಿ ಮಾಡಲಾಗುತ್ತಿದೆ ಎಂದು ಪ್ರತಿ ಸರ್ಕಾರಗಳು ದೇಶದ ನಾಗರೀಕತೆಗೆ ಮತ್ತು ವಿಶ್ವಸಂಸ್ಥೆಗೆ ಕಾಲಕಾಲಕ್ಕೆ ವರದಿ ಕೊಡಬೇಕು. ಮಕ್ಕಳ ಸ್ಥಿತಿ ಉತ್ತಮಪಡಿಸಲು ಸಕಾರಗಳು ಅಂತರಾಷ್ಟ್ರೀಯ ಸಹಕಾರ ನೀಡಬೇಕು.

**ಪ್ರಕಟಣೆ: ಕಪುಚಿನ್ ಕೃಷಿಕ್**
**ಸೇವಾ ಕೇಂದ್ರ (ರಿ) ವಿಮುಕ್ತಿ ಲ್ಯಾಲ**
ಇಮೇಲ್: capuchinchildfund@gmail.com
ವೆಬೆಸೈಟ್: capuchinksk.org

**ಬನ್ನಿ ನಾವೆಲ್ಲರೂ ಕೈ ಜೋಡಿಸಿ ಎಲ್ಲಾ ಮಕ್ಕಳಿಗೂ ಅವರ ಹಕ್ಕುಗಳನ್ನು ದೊರಕಿಸುವಲ್ಲಿ ಸಹಕರಿಸೋಣ**

# ಮಕ್ಕಳ ಹಕ್ಕುಗಳು
# CHILD RIGHTS

**(ಜನಸಾಮಾನ್ಯರಿಗೆ ಮಕ್ಕಳ ಹಕ್ಕುಗಳ ಕುರಿತು ಮಾಹಿತಿ ಪತ್ರ)**

## ಮಕ್ಕಳ ಹಕ್ಕುಗಳು

"ಮಕ್ಕಳ ಹಕ್ಕುಗಳು" ಎಂದರೆ ಮಗುವಿನ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಅವಶ್ಯಕತೆಗಳು, ಅಗತ್ಯವಾದದ್ದು, ಬೇಕೇ ಬೇಕಾದ್ದು, ಲಭಿಸಬೇಕಾದದ್ದು ಪಡೆಯಲೇ ಬೇಕಾದ್ದು, ವಯಸ್ಕರು ಅವರಿಗೆ ನೀಡಲೇ ಬೇಕಾದ್ದು, ಅವರು ಅನುಭವಿಸಬೇಕಾದ್ದು "ಮಕ್ಕಳ ಹಕ್ಕುಗಳು"

## ಮಕ್ಕಳ ಹಕ್ಕುಗಳ ಒಡಂಬಡಿಕೆ
## (Convention on the Rights of Child)

ಮಕ್ಕಳಿಗೆ ಕಾನೂನು ಬದ್ಧವಾಗಿ ಅನುಭವಿಸಲು ಅವರ ಹಕ್ಕುಗಳನ್ನು ನೀಡಬೇಕು ಎನ್ನುವ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆ 1979ರಿಂದ ಚರ್ಚೆ ನಡೆಸಿ ಒಡಂಬಡಿಕೆಯನ್ನು ತಯಾರಿಸಿ, ಹಲವಾರು ಪ್ರತಿಗಳನ್ನು ಬರೆದು ವಿಮರ್ಶಿಸಿ 1989ರಲ್ಲಿ ನವೆಂಬರ್ 12ರಂದು ಒಂದು ರೂಪ ಕೊಟ್ಟು ಅಂಗೀಕರಿಸಿದೆ. ಭಾರತ ದೇಶ 1992 ಡಿಸೆಂಬರ್ 11 ರಂದು ಒಡಂಬಡಿಕೆಗೆ ಒಪ್ಪಿ ಸಹಿ ಮಾಡಿದೆ.

**ಶಿಕ್ಷಣ ಎಲ್ಲಾ ಮಕ್ಕಳ ಮೂಲಭೂತ ಹಕ್ಕು**

ಈ ಒಡಂಬಡಿಕೆಯಲ್ಲಿ ಮುಖ್ಯವಾಗಿ 54 ಪರಿಚ್ಛೇದಗಳಿದ್ದು, ಒಡಂಬಡಿಕೆಯ ಮೊದಲನೇ ಭಾಗದ 41 ಪರಿಚ್ಛೇದಗಳಲ್ಲಿ ಒಟ್ಟಾಗಿ ಮುಖ್ಯವಾಗಿ 4 ಹಕ್ಕುಗಳು ಎದ್ದು ಕಾಣುತ್ತವೆ. ಇವು ಇಡೀ ಒಡಂಬಡಿಕೆಯ 54 ಪರಿಚ್ಛೇದಗಳ ಬಹಳ ಪ್ರಮುಖವಾದ ನಾಲ್ಕು ಹಕ್ಕುಗಳು ಅವು ಯಾವುದೆಂದರೆ:

1. **ಬದುಕುವ ಹಕ್ಕು:**

   ಪ್ರತಿಯೊಂದು ಮಗುವಿಗೂ ಜನ್ಮ ಹೊಂದುವ, ಜೀವಿಸುವ, ಉತ್ತಮ ಆರೋಗ್ಯ ಸೇವೆ ಪಡೆಯುವ, ಒಂದು ಹೆಸರು ಹೊಂದಿರುವ, ಪೌಷ್ಟಿಕ ಆಹಾರ ಪಡೆಯುವ, ತಾನು ಒಂದು ದೇಶದ ಪ್ರಜೆ ಎಂದು ಗುರುತಿಸಿಕೊಳ್ಳುವ ಹಕ್ಕು.

2. **ರಕ್ಷಣೆಯ ಹಕ್ಕು:**

   ದಬ್ಬಾಳಿಕೆ, ತೊಂದರೆ, ಕಿರುಕುಳ, ಹಿಂಸೆಗಳ ವಿರುದ್ಧ ತುರ್ತು ಸಂದರ್ಭಗಳಲ್ಲಿ ಮತ್ತು ಶಸ್ತ್ರಾಸ್ತ್ರಗಳಿಂದ ರಕ್ಷಣೆ.

3. **ಅವಕಾಶ ಮತ್ತು ವಿಕಾಸ ಹೊಂದುವ ಹಕ್ಕು:**

   ಶಿಕ್ಷಣ, ಬೆಳೆಯಲು ಅವಕಾಶ, ಆರೋಗ್ಯ, ರಕ್ಷಣೆ, ಸಾಮಾಜಿಕ ಭದ್ರತೆ, ಬಿಡುವು, ಮನೋರಂಜನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ.

4. **ಭಾಗವಹಿಸುವ ಹಕ್ಕು:**

   ಮಕ್ಕಳ ಅಭಿಪ್ರಾಯಗಳಿಗೆ ಮನ್ನಣೆ, ಸ್ವಾತಂತ್ರ್ಯ, ಮಾಹಿತಿಯ ಲಭ್ಯತೆ, ಚಿಂತನೆಗೆ, ಬುದ್ಧಿ ಚಟುವಟಿಕೆಗಳಿಗೆ ಅವಕಾಶ, ಸಂಘಟಿತರಾಗುವುದು ಮತ್ತು ಧಾರ್ಮಿಕ ಹಕ್ಕುಗಳು

**ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹಿಸಿ**

**ಕಳೆದುಕೊಂಡ ಬಾಲ್ಯ ಮತ್ತೆಂದೂ ಬಾರದು**

## ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿರುವ 54 ಪರಿಚ್ಛೇದಗಳು

# ಮಕ್ಕಳಿಗಾಗಿ ಮಕ್ಕಳ ಹಕ್ಕುಗಳು

1. ನಿಮಗೆ 18 ವರ್ಷ ತುಂಬುವವರೆಗೆ ನೀವು ಮಕ್ಕಳೇ.
2. ನಿಮಗೆ ಯಾವುದೇ ಕಾರಣಕ್ಕೂ (ಹೆಣ್ಣು/ಗಂಡು) ಯಾರು ಎಲ್ಲಿಯೂ ಯಾವುದೇ ವಿಚಾರಕ್ಕೂ ಬೇಧಭಾವ ಮಾಡಬಾರದು.
3. ಯಾವುದೇ ವಿಚಾರವಾಗಲಿ. ಯಾರೇ ಆಗಲಿ ನಿರ್ಧರಿಸುವಾಗ ಅದರಿಂದ ಮಕ್ಕಳಿಗೆ ಒಳ್ಳೆಯದು ಆಗುವುದೋ ಅಥವಾ ಇಲ್ಲವೋ ಎಂಬುದನ್ನು ಪರಿಶೀಲಿಸಬೇಕು.
4. ನಿಮ್ಮ ಹಕ್ಕುಗಳನ್ನು ಜಾರಿಮಾಡಲು ಸರ್ಕಾರಗಳು ಸೂಕ್ತವಾದ ನಿರ್ಧಾರ, ಯೋಜನೆ, ಕಾರ್ಯಕ್ರಮಗಳನ್ನು ನಡೆಸಬೇಕು.
5. ನಿಮ್ಮ ರಕ್ಷಣೆ, ಪೋಷಣೆ ಮಾಡಲು ತಾಯಿ, ತಂದೆ, ಪೋಷಕರು ಮಾರ್ಗದರ್ಶನ ಮಾಡುವ ಜವಾಬ್ದಾರಿ ತೆಗೆದುಕೊಳ್ಳಲೇಬೇಕು.
6. ಹುಟ್ಟಿದ ಎಲ್ಲಾ ಮಕ್ಕಳಿಗೂ ಸಾಯದೇ ಬದುಕುಳಿಯುವ ಮತ್ತು ಆರೋಗ್ಯದಿಂದ ಜೀವಿಸುವ ಹಕ್ಕು ಇದೆ.
7. ಮಕ್ಕಳೂ ಪ್ರಜೆಗಳೇ, ಹುಟ್ಟಿದ ಪ್ರತೀ ಮಗುವಿಗೆ ಹೆಸರು, ದೇಶ ಮತ್ತು ಕುಟುಂಬವನ್ನು ಹೊಂದುವ ಹಕ್ಕು ಇದೆ.
8. ಮಕ್ಕಳ ಹೆಸರು, ಗುರುತು ಗೌರವದ ಹಕ್ಕಿಗೆ ಯಾರೂ ತೊಂದರೆ, ಅವಮಾನ ಮಾಡಬಾರದು.
9. ತಾಯಿ, ತಂದೆ, ಪೋಷಕರಿಂದ ಯಾರೂ ಮಕ್ಕಳನ್ನು ಬೇರೆ ಮಾಡಬಾರದು.
10. ಮಕ್ಕಳು ಮತ್ತು ಪೋಷಕರನ್ನು ಬಲವಂತವಾಗಿ ದೂರ ಮಾಡಲೇ ಬಾರದು. ಅವರು ಜೊತೆಗಿರಲು ಸರ್ಕಾರ ಅವಕಾಶ ಮಾಡಿಕೊಳ್ಳಬೇಕು.
11. ಮಕ್ಕಳನ್ನು ಕದಿಯುವುದು, ಬಚ್ಚಿಡುವುದು, ಮಾರುವುದು, ಸಾಗಿಸುವುದು ಶಿಕ್ಷಾರ್ಹ ಅಪರಾಧ.
12. ನಿಮಗೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವಾಗ ನಿಮ್ಮ ಅಭಿಪ್ರಾಯಗಳನ್ನು ವಯಸ್ಕರು ಕೇಳಲೇಬೇಕು.

**ಮಕ್ಕಳನ್ನು ದುಡಿಸುವುದು ಶಿಕ್ಷಾರ್ಹ**

**ಶಿಕ್ಷಣ ಎಲ್ಲಾ ಮಕ್ಕಳ ಮೂಲಭೂತ ಹಕ್ಕು ಅದನ್ನು ಅವರಿಗೆ ನೀಡಿ**

13. ನಿಮ್ಮ ಅಭಿಪ್ರಾಯ ತಿಳಿಸುವ ಹಕ್ಕಿಗೆ ನೆರವಾಗಲು ದೇಶ, ಭಾಷೆ, ಗಡಿಗಳ ಅಂತರವಿಲ್ಲದೇ ಮಾಹಿತಿ ಪಡೆಯುವ, ವಿಚಾರ ತಿಳಿಯುವ ಹಕ್ಕು ನಿಮಗಿದೆ.
14. ತಾಯಿ ತಂದೆಯ ಮಾರ್ಗದರ್ಶನದಲ್ಲಿ ವಿಚಾರ ಮಾಡುವ, ನಿಮ್ಮ ಇಷ್ಟದಂತೆ ಆಲೋಚಿಸುವ, ಧಾರ್ಮಿಕ ವಿಧಿಗಳನ್ನು ಆಚರಿಸುವ ಹಕ್ಕು ನಿಮಗಿದೆ.
15. ಎಲ್ಲಾ ಮಕ್ಕಳೊಡನೆ ಬೆರೆಯುವ ಸಂಘ ಮಾಡುವ, ಚರ್ಚಿಸಿ ಚಿಂತಿಸಿ ನಿರ್ಧರಿಸುವ ಹಕ್ಕು ನಿಮಗಿದೆ.
16. ಮಕ್ಕಳಿಗೂ ಖಾಸಗೀತನದ ಹಕ್ಕಿದೆ.
17. ಜಗತ್ತಿನ ಮಾಹಿತಿಗಳು ನಿಮಗೆ ಸಿಗಲು ಪುಸ್ತಕ, ರೇಡಿಯೋ, ದೂರದರ್ಶನ, ಅಂತರ್ಜಾಲ, ಸಿನಿಮಾಗಳು ಮಕ್ಕಳಿಗೆ ಲಭ್ಯವಿರಲೇಬೇಕು.
18. ತಾಯಿ ತಂದೆಯರೊಡನೆ ಇದ್ದು ಬೆಳೆಯುವ ಹಕ್ಕು ಎಲ್ಲಾ ಮಕ್ಕಳಿಗಿದೆ. ಇದು ಪೋಷಕರ ಜವಾಬ್ದಾರಿ, ಸರ್ಕಾರ ಇದಕ್ಕೆ ಬೆಂಬಲ ನೀಡಲೇಬೇಕು.
19. ಮಕ್ಕಳಿಗೆ ಹೊಡೆದು ಬೈದು, ನಿರ್ಲಕ್ಷಿಸಿ, ಕಿರುಕುಗಳ, ದುಡಿಸಿ ತೊಂದರೆ ಕೊಡುವುದು, ಹಿಂಸೆ ಕೊಡುವುದು ಅಪರಾಧ. ಇವೆಲ್ಲವೂ ಶಿಕ್ಷಾರ್ಹ.
20. ತಾಯಿ ತಂದೆ, ಪೋಷಕರಿಲ್ಲದೆ ಮಕ್ಕಳಿಗೆ ವಿಶೇಷ ರಕ್ಷಣೆ ನೀಡಬೇಕು. ಅವರಿಗೆ ದತ್ತು ಮೂಲಕ ಪರ್ಯಾಯ ಕುಟುಂಬ ವ್ಯವಸ್ಥೆ ಮಾಡಲೇಬೇಕು.
21. ಮಕ್ಕಳನ್ನು ದತ್ತು ನೀಡಬೇಕಾದಾಗ ಅದು ಮಗುವಿನ ಹಿತದೃಷ್ಟಿಯಿಂದಲೇ ಆಗಬೇಕು.
22. ಆಶ್ರಯ, ಕುಟುಂಬ ಇಲ್ಲದ ಮಕ್ಕಳಿಗೆ ರಕ್ಷಣೆ ನೀಡುವುದು ಸಮಾಜ ಮತ್ತು ಸರ್ಕಾರದ ಕರ್ತವ್ಯ.
23. ದೈಹಿಕ, ಮಾನಸಿಕ, ತೊಂದರೆ ಇದ್ದರೂ ಗೌರವಯುತವಾಗಿ ಶಿಕ್ಷಣ, ಮನೋರಂಜನೆ, ಆಟೋಟಗಳಲ್ಲಿ ಭಾಗವಹಿಸುವ, ಪೂರ್ಣವಾದ ಜೀವನ ನಡೆಸುವ ಹಕ್ಕು ಮಕ್ಕಳಿಗೆ ಇದೆ.
24. ಆರೋಗ್ಯ ಸೇವೆ ಸೌಲಭ್ಯಗಳು ಮಕ್ಕಳಿಗೆ ಸಿಗಬೇಕು. ವೈದ್ಯಕೀಯ ನೆರವು, ಮಾಹಿತಿ ನೀಡಿ ಮಕ್ಕಳು ಸಾಯದಂತೆ, ಅಂಗವಿಕಲರಾಗದಂತೆ ತಡೆಯಬೇಕು.

**ಮಕ್ಕಳ ದುಡಿಮೆ ದೇಶಕ್ಕೆ ಕಳಂಕ**